ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಡಾ || ಹೆಚ್.ಬಿ. ಪ್ರಭಾಕರ ಶಾಸ್ತ್ರಿ

ಆರ್.ಡಿ. ರಾಜೀವ್ -ವಿರುದ್ಧ-ರೂಪಾ*

ಆರ್.ಪಿ.ಎಫ್.ಸಿ.ಸಂಖ್ಯೆ: 133/2014, ದಿನಾಂಕ 25 ನೇ ಜನವರಿ, 2021.

ಆಜ್ಞೆ

ನ್ಯಾಯಮೂರ್ತಿ ಡಾ || ಹೆಚ್.ಬಿ. ಪ್ರಭಾಕರ ಶಾಸ್ತ್ರಿ:

ಪ್ರಸ್ತುತ ಅರ್ಜಿದಾರನು ಮೈಸೂರಿನ ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರ ನ್ಯಾಯಾಲಯದಲ್ಲಿನ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ " ಕೌಟುಂಬಿಕ ನ್ಯಾಯಾಲಯ " ವೆಂದು ಉಲ್ಲೇಖಿಸಲಾಗುವುದು) ಕ್ರಿಮಿನಲ್ ಸಂಕೀರ್ಣ 296/2008 ರಲ್ಲಿ ಪ್ರತ್ಯರ್ಜಿದಾರನಾಗಿದ್ದು, ಪ್ರಸ್ತುತ ಪ್ರತ್ಯರ್ಜಿದಾರಳು ಅದರಲ್ಲಿ ಅರ್ಜಿದಾರಳಾಗಿ ದಂಡ ಪ್ರಕ್ರಿಯಾ ಸಂಹಿತೆ, 1973 ರ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ " ದಂ.ಪ್ರ.ಸಂ. " ಎಂದು ಉಲ್ಲೇಖಿಸಲಾಗುವುದು) 125 ನೇ ಪ್ರಕರಣದ ಅಡಿಯಲ್ಲಿ ಅದರಲ್ಲಿನ ಪ್ರತ್ಯರ್ಜಿದಾರನಿಂದ ಮಾಸಿಕ 5,000/- ರೂ.ಗಳ ಜೀವನಾಂಶ ಕೋರಿ ದಾವೆ ಹೂಡಿದ್ದಳು.

2. ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿದಾರಳ (ಪತ್ನಿ) ವಾದವೆಂದರೆ, ಅದರಲ್ಲಿನ ಪ್ರತ್ಯರ್ಜಿದಾರನೊಂದಿಗೆ (ಪತಿ) ಮೈಸೂರಿನ ಕೆ.ಆರ್. ನಗರದಲ್ಲಿದಿನಾಂಕ: 08.06.2003 ರಂದು ಹಿಂದು ಸಂಪ್ರದಾಯದ ಪ್ರಕಾರ ಮದುವೆಯಾಗಿತ್ತು.ಮದುವೆಯಾದ ನಂತರ, ಅವರು ಕೆಲವು ಕಾಲ ಬೆಂಗಳೂರಿನಲ್ಲಿ ಒಟ್ಟಿಗೆ ವಾಸಿಸುತ್ತಿದ್ದರು.ಆ ತರುವಾಯ, ಅವರು ಪ್ರತ್ಯೇಕವಾದರು ಮತ್ತು ಪತ್ನಿಯು ಮೈಸೂರಿನಲ್ಲಿರುವ ತನ್ನ ಸಹೋದರನ ಮನೆಯಲ್ಲಿ ಪ್ರತ್ಯೇಕವಾಗಿ ವಾಸಿಸುವುದನ್ನು ಮುಂದುವರಿಸಿದಳು.

3. ಅದರಲ್ಲಿನ ಪ್ರತ್ಯರ್ಜಿದಾರನ (ಪತಿ) ಪ್ರಕಾರ, ಅದರಲ್ಲಿನ ಅರ್ಜಿದಾರಳೊಂದಿಗೆ ಆತನ ವಿವಾಹವಾದ ನಂತರ, ಆಕೆಯು ತನ್ನ ತಿಂಗಳ ಮುಟ್ಟಿನ ಸಮಯದಲ್ಲಿ ಕೆಲವೊಂದು ಸಮಸ್ಯೆಗಳನ್ನು ಹೊಂದಿದ್ದನ್ನು ಮತ್ತು ಮಾಸಿಕ ಋತುಚಕ್ರದ ಅವಧಿಯಲ್ಲಿ ಅತ್ಯಧಿಕ ರಕ್ತಸ್ರಾವವಾಗುತ್ತಿದ್ದದ್ದನ್ನು ಹಾಗೂ ಆಕೆಯು ತನ್ನ ಪತಿಯೊಂದಿಗೆ ಸಂತೋಷಕರ ವೈವಾಹಿಕ ಜೀವನವನ್ನು ನಡೆಸಲಾಗುತ್ತಿಲ್ಲವೆಂಬುದನ್ನು ಆತನು ಗಮನಿಸಿದನು.ಈ ಸಂಬಂಧದಲ್ಲಿ ಹಲವಾರು ವೈದ್ಯರೊಂದಿಗೆ ಸಮಾಲೋಚಿಸಲಾಯಿತಾದರೂ, ಅದು ಫಲಕಾರಿಯಾಗಲಿಲ್ಲ.ಅಂತಿಮವಾಗಿ, ಆಕೆಯ ಗರ್ಭಕೋಶದಲ್ಲಿ ಗಂಭೀರ ಸಮಸ್ಯೆ ಇದ್ದು, ಅದು ವಾಸಿಯಾಗಲಾರದ ಕಾಯಿಲೆಯೆಂದು ಕಂಡುಬಂದಿತು.

ಆತನ ಮುಂದುವರಿದ ವಾದವೆಂದರೆ, ಆತನ ಪತ್ನಿಯು ಶಸ್ತ್ರಚಿಕಿತ್ಸೆಗೆ ಸಹ ಒಳಗಾಗಿ, ಗರ್ಭಕೋಶವನ್ನು ತೆಗೆದುಹಾಕಲಾಯಿತು ಹಾಗೂ ಆಕೆಗೆ ಮಕ್ಕಳಾಗುವ ಅವಕಾಶ ಇಲ್ಲವಾಯಿತು.ಇದರಿಂದ ತನ್ನ ಸಂತಾನವನ್ನು ಹೊಂದುವ ಆತನ ಕನಸು ಭಗ್ನವಾಯಿತು, ಹಾಗಾಗಿ, ಆತನು ತೀವ್ರ ಖಿನ್ನತೆಗೆ ಒಳಗಾದನು.ಇದರ ಹೊರತಾಗಿಯೂ, ಪತ್ನಿಯು ತನ್ನ ಮೇಲೆ ಹಲವಾರು ಸುಳ್ಳು ಆರೋಪಗಳನ್ನು ಹೊರಿಸಿ ತನ್ನ ಸಹವಾಸವನ್ನು ತೊರೆದಳು ಎಂಬುದು ಆತನ ವಾದವಾಗಿತ್ತು.

4. ಈ ನಡುವೆ, ಪ್ರಸ್ತುತ ಅರ್ಜಿದಾರನು (ಪತಿ) ಸಹ, ಹಿಂದು ವಿವಾಹ ಅಧಿನಿಯಮ, 1955 ರ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ " ಹಿಂ.ವಿ. ಅಧಿನಿಯಮ ಎಂದು ಉಲ್ಲೇಖಿಸಲಾಗುವುದು) 13 ( 1) (i-ಎ) ಪ್ರಕರಣದ ಅಡಿಯಲ್ಲಿ ಪ್ರಸ್ತುತ ಪ್ರತ್ಯರ್ಜಿದಾರಳ (ಪತ್ನಿ) ವಿರುದ್ಧ ಎಂ. ಸಿ.ಸಂಖ್ಯೆ: 489/2009 ರಲ್ಲಿ ಅ ಅದೇ ಕೌಟುಂಬಿಕ ನ್ಯಾಯಾಲಯದ ಮುಂದೆ, ವಿವಾಹ ವಿಚ್ಛೇದನ ಕೋರಿ ವೈವಾಹಿಕ ಮೊಕದ್ದಮೆಯನ್ನು ಹೂಡಿದ್ದನು.ಕೌಟುಂಬಿಕ ನ್ಯಾಯಾಲಯವು ಎರಡೂ ವಿಷಯಗಳನ್ನು ಒಟ್ಟಿಗೆ ವಿಚಾರಣೆ ನಡೆಸಿತು.ಅದರಲ್ಲಿ ಎರಡೂ ಪಕ್ಷಕಾರರು ತಮ್ಮ ತಮ್ಮ ಸಾಕ್ಷ್ಯಗಳನ್ನು ಮಂಡಿಸಿ, ದಸ್ತಾವೇಜುಗಳನ್ನು ಗುರುತಿಸಿದ್ದಾರೆ.

5. ಎರಡೂ ಕಡೆಯವರ ವಾದಗಳನ್ನು ಆಲಿಸಿದ ನಂತರ, ಕೌಟುಂಬಿಕ ನ್ಯಾಯಾಲಯವು,ದಿನಾಂಕ: 03.01.2013 ರ ತನ್ನ ಸಾಮಾನ್ಯ ತೀರ್ಪಿನ ಮೂಲಕ ಹಿಂದು ವಿವಾಹ ಅಧಿನಿಯಮದ 13 ( 1) (i-ಎ) ಪ್ರಕರಣದ ಅಡಿಯಲ್ಲಿ ವಿಚ್ಛೇದನಕ್ಕಾಗಿ ಪತಿಯು ಸಲ್ಲಿಸಿದ ಕ್ರಿಮಿನಲ್ ಸಂಕೀರ್ಣ ಅರ್ಜಿಸಂಖ್ಯೆ: 489/2009 ರಲ್ಲಿನ ಅರ್ಜಿಯನ್ನು ಪುರಸ್ಕರಿಸಿದೆ.ಅದು ಅರ್ಜಿಯಲ್ಲಿನ ಪಕ್ಷಕಾರರ ನಡುವೆ ಆದ ವಿವಾಹವನ್ನು ರದ್ದುಪಡಿಸಿದೆ.ಅದು, ಕ್ರಿಮಿನಲ್ ಸಂಕೀರ್ಣ ಅರ್ಜಿಸಂಖ್ಯೆ: 296/2008 ರಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 125 ನೇ ಪ್ರಕರಣದ ಅಡಿಯಲ್ಲಿ ಪತ್ನಿಯು ಸಲ್ಲಿಸಿದ್ದ ಅರ್ಜಿಯನ್ನು ಸಹ ಭಾಗಶಃ ಪುರಸ್ಕರಿಸಿ, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ತನ್ನ ಪತ್ನಿಗೆ (ಪ್ರಸ್ತುತ ಪ್ರತ್ಯರ್ಜಿದಾರಳಿಗೆ) ಪ್ರತಿ ತಿಂಗಳು 3,000/ ರೂ.ಗಳ ಜೀವನಾಂಶ ಸಂದಾಯ ಮಾಡಲು ಪತಿಗೆ ನಿರ್ದೇಶಿಸಿದೆ.

ಕ್ರಿಮಿನಲ್ ಸಂಕೀರ್ಣ ಅರ್ಜಿಸಂಖ್ಯೆ: 296/2008 ರಲ್ಲಿ ಹೊರಡಿಸಿದ ಜೀವನಾಂಶ ಸಂಬಂಧಿತ ಸದರಿ ಆದೇಶದಿಂದ ಬಾಧಿತನಾಗಿ, ಕೌಟುಂಬಿಕ ನ್ಯಾಯಾಲಯದಲ್ಲಿನ ಪ್ರತ್ಯರ್ಜಿದಾರ ಪತಿಯು ಪ್ರಸ್ತುತ ಮನರೀಕ್ಷಣಾ ಅರ್ಜಿಯನ್ನು ಸಲ್ಲಿಸಿದ್ದಾನೆ.

6. ಪ್ರತ್ಯರ್ಜಿದಾರನ ಪತ್ನಿಗೆ ನೋಟೀಸನ್ನು ಜಾರಿ ಮಾಡಿದ ನಂತರ ಸಹ ಈ ನ್ಯಾಯಾಲಯದ ಮುಂದೆ ಪತ್ನಿಯು ಹಾಜರಾಗುವಲ್ಲಿ ವಿಫಲಳಾಗಿದ್ದಾಳೆ ಮತ್ತು ಆಕೆಯು ಹಾಜರಾಗದೆ ಉಳಿದಿದ್ದಾಳೆ ಎಂಬ ಸಂಗತಿಯ ಹಿನ್ನೆಲೆಯಲ್ಲಿ, ಈ ನ್ಯಾಯಾಲಯವುದಿನಾಂಕ: 08.01.2021 ರ ತನ್ನ ಆದೇಶದ ಮೂಲಕ, ಮಾನ್ಯ ನ್ಯಾಯವಾದಿ ಶ್ರೀಮತಿ ಅರ್ಚನಾ ಕೆ.ಎಂ. ಇವರನ್ನು, ಪ್ರತ್ಯರ್ಜಿದಾರಳ (ಪತ್ನಿ) ಪರ ವಾದ ಮಂಡಿಸಲು ಪ್ರತ್ಯರ್ಜಿದಾರಳ ಪರ ನ್ಯಾಯಾಲಯ ಸಲಹೆಗಾರರನ್ನಾಗಿ (ಅಮಿಕಸ್ ಕ್ಯೂರಿ) ನೇಮಕ ಮಾಡಿದೆ.

7. ಕೌಟುಂಬಿಕ ನ್ಯಾಯಾಲಯದಿಂದ ದಾಖಲೆಗಳನ್ನು ತರಿಸಿಕೊಂಡು, ಅವುಗಳನ್ನು ಈ ನ್ಯಾಯಾಲಯದ ಮುಂದೆ ಮಂಡಿಸಲಾಗಿದೆ.

8. ಅರ್ಜಿದಾರನ (ಪತಿ) ಪರ ಮಾನ್ಯ ನ್ಯಾಯವಾದಿಗಳು ಮತ್ತು ಪ್ರತ್ಯರ್ಜಿದಾರಳ ಪರ ಮಾನ್ಯ ನ್ಯಾಯಾಲಯ ಸಲಹೆಗಾರರು (ಅಮಿಕಸ್ ಕ್ಯೂರಿ) ಖುದ್ದಾಗಿ ಈ ನ್ಯಾಯಾಲಯದ ಮುಂದೆ ಹಾಜರಾಗಿದ್ದಾರೆ.

9. ಎರಡೂ ಕಡೆಯವರ ವಾದಗಳನ್ನು ಆಲಿಸಲಾಯಿತು.ಕೌಟುಂಬಿಕ ನ್ಯಾಯಾಲಯದ ದಾಖಲೆಗಳನ್ನು ಒಳಗೊಂಡು ಈ ನ್ಯಾಯಾಲಯದ ಮುಂದೆ ಮಂಡಿಸಲಾದ ಸಾಕ್ಷ್ಯಗಳನ್ನು ಅವಲೋಕಿಸಲಾಯಿತು.

10. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳ ಮತ್ತು ಪ್ರತ್ಯರ್ಜಿದಾರಳ ಪರ ಮಾನ್ಯ ನ್ಯಾಯಾಲಯ ಸಲಹೆಗಾರರ (ಅಮಿಕಸ್ ಕ್ಯೂರಿ) ವಾದಗಳನ್ನು ಆಲಿಸಿದ ನಂತರ, ಈ ಪರಿಷ್ಕರಣೆ ಅರ್ಜಿಯಲ್ಲಿ ನನ್ನ ಪರಿಗಣನೆಗೆ ಉದ್ಭವಿಸಿದಂಥ ಏಕಮಾತ್ರ ಅಂಶವೆಂದರೆ:

ಪುನರೀಕ್ಷಣೆಗೆ ಸಲ್ಲಿಸಿರುವ ಆದೇಶವು, ಈ ನ್ಯಾಯಾಲಯದ ಹಸ್ತಕ್ಷೇಪವನ್ನು ಸಮರ್ಥಿಸುವಂತೆ ತರ್ಕವಿರುದ್ಧ, ಕಾನೂನುಬಾಹಿರ ಮತ್ತು ತಪ್ಪಾದುದಾಗಿದೆಯೇ?

11. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳು ತಮ್ಮ ವಾದದಲ್ಲಿ, ಕ್ರಿಮಿನಲ್ ಸಂಕೀರ್ಣ ಅರ್ಜಿಸಂಖ್ಯೆ: 296/2008 ನ್ನು ಹೂಡಿದ ದಿನಾಂಕದಂದು ಇದ್ದಂತೆ ಪಕ್ಷಕಾರರ ನಡುವೆ ವೈವಾಹಿಕ ಸಂಬಂಧವಿದ್ದು, ಪಕ್ಷಕಾರರು ಪತಿ-ಪತ್ನಿಯರು ಎಂಬುದು ಒಪ್ಪಿಕೊಂಡ ಸಂಗತಿ ಎಂಬುದಾಗಿ ನಿವೇದಿಸಿಕೊಂಡಿದ್ದಾರೆ.ಮುಂದುವರಿದು ಅವರು, ಪತಿಯು ವಿವಾಹದ ವಿಚ್ಛೇದನಕ್ಕಾಗಿ ವೈವಾಹಿಕ ಮೊಕದ್ದಮೆಯನ್ನು ಹೂಡಿದ್ದನಾದರೂ, ವಾಸ್ತವದಲ್ಲಿ, ಕಾನೂನಿನ ದೃಷ್ಟಿಯಲ್ಲಿ ಈ ವಿವಾಹವು ಅಸಿಂಧುವಾದುದಾಗಿದ್ದರಿಂದ, ಅದು ಅನೂರ್ಜಿತವಾಗುತ್ತದೆ ಎಂದು ನಿವೇದಿಸಿಕೊಂಡಿದ್ದಾರೆ.ಮೊಕದ್ದಮೆಯು ಹೀಗಿರುವಾಗ, ಕಾನೂನಿನ ದೃಷ್ಟಿಯಲ್ಲಿ ವಿವಾಹವೇ ಅಸಿಂಧುವಾಗಿದ್ದಾಗ, ಪ್ರಸ್ತುತ ಪ್ರತ್ಯರ್ಜಿದಾರನ ಪತ್ನಿಯು ಜೀವನಾಂಶಕ್ಕೆ ಹಕ್ಕುಳ್ಳವಳಾಗುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.

ಇದಲ್ಲದೆ ಮಾನ್ಯ ನ್ಯಾಯವಾದಿಗಳು, ಪ್ರಸ್ತುತ ಅರ್ಜಿದಾರನು (ಪತಿ) ತನ್ನ ವಯೋವೃದ್ಧ ತಾಯಿಯನ್ನು ಸಹ ನೋಡಿಕೊಳ್ಳಬೇಕಿದ್ದು, ಆತನಿಗೆ ಸಾಕಷ್ಟುಗಳಿಕೆ ಇಲ್ಲದಿರುವುದರಿಂದ, ಆತನು ತನ್ನ ಪತ್ನಿಗೆ ಯಾವುದೇ ಜೀವನಾಂಶ ನೀಡಲು ಅಸಮರ್ಥನಾಗಿದ್ದಾನೆ ಎಂದು ನಿವೇದಿಸಿಕೊಂಡಿದ್ದಾರೆ.

ಇದಲ್ಲದೆ ಅವರು, ಈ ದಿನದಂದು ಅರ್ಜಿದಾರನು 52 ವರ್ಷಗಳಿಗಿಂತ ಹೆಚ್ಚಿನ ವಯಸ್ಸಿನವನಾಗಿದ್ದು, ಪ್ರಸ್ತುತ ಪ್ರತ್ಯರ್ಜಿದಾರಳಾದ ಪತ್ನಿಯು, ಆತನ ಜೀವನವನ್ನು ಹಾಳು ಮಾಡಿದ್ದಾಳೆ.ಇಂಥ ಸನ್ನಿವೇಶದಲ್ಲಿ, ಪತಿಯು ತನ್ನ ಪತ್ನಿಗೆ ಯಾವುದೇ ಜೀವನಾಂಶ ನೀಡಲು ಜವಾಬ್ದಾರನಾಗುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.

12. ಪ್ರತ್ಯರ್ಜಿದಾರಳ (ಪತ್ನಿಯ) ಪರ ಮಾನ್ಯ ನ್ಯಾಯಾಲಯ ಸಲಹೆಗಾರರು (ಅಮಿಕಸ್ ಕ್ಯೂರಿ) ತಮ್ಮ ವಾದದಲ್ಲಿ, ಕೌಟುಂಬಿಕ ನ್ಯಾಯಾಲಯದಲ್ಲಾಗಲಿ ಅಥವಾ ಪ್ರಸ್ತುತ ನ್ಯಾಯಾಲಯದಲ್ಲಾಗಲಿ ಪತಿಯು ಆರೋಪಿತ ವಿವಾಹದ ಅನೂರ್ಜಿತತೆಯ ಬಗ್ಗೆ ಎಂದಿಗೂ ಪ್ರಸ್ತಾಪಿಸದೆ, ಮೊದಲ ಬಾರಿಗೆ ಅವರು ಹೊಸ ಕಾರಣವನ್ನು ಸೃಷ್ಟಿಸಿದ್ದು, ಅದನ್ನು ಅವರ ವಿವಾಹದ ಸಿಂಧುತ್ವವನ್ನು ಒಪ್ಪಿಕೊಂಡ ನಂತರ ಮಾತ್ರವೇ, ಪತಿಯು ಅವರ ವಿವಾಹದ ವಿಚ್ಛೇದನಕ್ಕಾಗಿ ದಾವೆಯನ್ನು ಹೂಡಿದ್ದಾನೆಂಬ ಸರಳ ಕಾರಣದಿಂದಾಗಿ ಸಮರ್ಥಿಸಲಾಗುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.

ಇದಲ್ಲದೆ ಅವರು, ಪತಿಯು ಒಂದಕ್ಕಿಂತ ಹೆಚ್ಚು ಸ್ಥಳಗಳಲ್ಲಿ ನೆಲೆಗೊಂಡ ಟೈಲರಿಂಗ್ ಅಂಗಡಿಯನ್ನು ಹೊಂದಿದ್ದು, ತನ್ನ ಅಧೀನದಲ್ಲಿ ಕೆಲಸ ಮಾಡಲು ಬಹಳಷ್ಟು ವ್ಯಕ್ತಿಗಳನ್ನು ನಿಯೋಜಿಸಿಕೊಂಡಿದ್ದು, ಪ್ರತಿ ದಿನ 5,000/- ರೂ.ಗಳಿಗಿಂತ ಕಡಿಮೆ ಇಲ್ಲದ ಮೊತ್ತವನ್ನು ಗಳಿಸುತ್ತಿರುವನಾದ್ದರಿಂದ, ಆತನ ಆರ್ಥಿಕ ತೊಂದರೆಯು ನಿರಾಧಾರವಾದುದಾಗಿದೆ ಎಂದು ವಾದಿಸಿದ್ದಾರೆ.

ಅಲ್ಲದೆ ಅವರು, ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿದಾರಳಾಗಿ ಪತ್ನಿಯು, ತನ್ನ ಪತಿ ಹಾಗೂ ತನ್ನ ಅತ್ತೆ ಇಬ್ಬರಿಂದಲೂ ಹೇಗೆ ತಾನು ಕೌರಕ್ಕೆ ಒಳಗಾಗಿದ್ದ ಎಂಬುದನ್ನು ವಿವರವಾಗಿ ನಿರೂಪಿಸಿದ್ದು, ಅದು ಆಕೆಯು ಪ್ರತ್ಯೇಕವಾಗಿ ವಾಸಿಸುವಂತೆ ಮಾಡಿದೆ; ಇದರ ಹೊರತಾಗಿ, ಅರ್ಜಿದಾರ ಪತಿಯು ತನ್ನ ಪತ್ನಿಯ ಜೀವನಾಂಶವನ್ನು ನಿರ್ಲಕ್ಷಿಸಿದ್ದು, ಹಾಗಾಗಿ, ಆಕೆಯು ಜೀವನಾಂಶಕ್ಕೆ ಅರ್ಹಳಾಗಿದ್ದಾಳೆ ಎಂದು ವಾದಿಸಿದ್ದಾರೆ.

ಮುಂದುವರಿದು ಅವರು, ಪತ್ನಿಯು ಉತ್ತಮ ವಿದ್ಯಾರ್ಹತೆ ಹೊಂದಿದವಳೆಂದು ಹೇಳಲಾಗಿದ್ದರೂ, ಆಕೆಯ ಶೈಕ್ಷಣಿಕ ಅರ್ಹತೆಯೊಂದೇ ಜೀವನೋಪಾಯಕ್ಕೆ ಗಳಿಕೆಯನ್ನು ತಂದುಕೊಡುವುದಿಲ್ಲ; ಹಾಗಾಗಿ, ಕೆಲಸವನ್ನು ಹುಡುಕಿಕೊಳ್ಳುವ ಸಾಮರ್ಥ್ಯವನ್ನು ತನ್ನನ್ನು ತಾನು ಪೋಷಿಸಿಕೊಳ್ಳುವುದಕ್ಕೆ ಸಮಾನವೆಂದು ಹೇಳಲಾಗುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.

13. ಇದರಲ್ಲಿನ ಪಕ್ಷಕಾರರುದಿನಾಂಕ: 08.06.2003 ರಂದು ಹಿಂದೂ ಸಂಪ್ರದಾಯದ ಪ್ರಕಾರ ಪರಸ್ಪರ ವಿವಾಹಿತರೆಂಬುದು ಒಪ್ಪಿಕೊಂಡ ಸಂಗತಿಯಾಗಿದೆ.ಪ್ರಸ್ತುತ ಅರ್ಜಿದಾರ-ಪತಿಯ ಪ್ರಕಾರ, ಪ್ರಸ್ತುತ ಪ್ರತ್ಯರ್ಜಿದಾರಳೊಂದಿಗೆ ತನ್ನ ವಿವಾಹವಾದ ನಂತರ, ಅತ್ಯಲ್ಪ ಕಾಲದಲ್ಲಿಯೇ, ತನ್ನ ಪತ್ನಿಯು ಕೆಲವೊಂದು ಮಾಸಿಕ ಋತುಚಕ್ರ ಸಮಸ್ಯೆಗಳಿಂದ ಬಳಲುತ್ತಿದ್ದಳೆಂಬುದನ್ನು ಗಮನಿಸಿದ್ದು, ಅಂತಿಮವಾಗಿ ಅದು ವೈದ್ಯಕೀಯವಾಗಿ ಆಕೆಯು ಗರ್ಭ ಧರಿಸಲು ಅಥವಾ ಸಾಮಾನ್ಯ ಕ್ರಮದಲ್ಲಿ ಯಾವುದೇ ಮಗುವನ್ನು ಪಡೆಯಲು ಅಸಮರ್ಥಳೆಂಬುದು ಪತ್ತೆಯಾಯಿತು.ಹಾಗಾಗಿ, ತನ್ನ ಅರ್ಜಿಯ ಮೊದಲಲ್ಲೇ ಸದರಿ ವೈದ್ಯಕೀಯ ಕಾರಣವನ್ನು ಮಂಡಿಸಿ, ಪ್ರಸ್ತುತ ಅರ್ಜಿದಾರ-ಪತಿಯು, ಪ್ರತ್ಯರ್ಜಿದಾರಳೊಂದಿಗೆ ತನ್ನ ವಿವಾಹದ ವಿಚ್ಛೇದನವನ್ನು ಕೋರಿ, ಕೌಟುಂಬಿಕ ನ್ಯಾಯಾಲಯದಲ್ಲಿ ಸಂಕೀರ್ಣ ಕ್ರಿಮಿನಲ್ ಅರ್ಜಿಸಂಖ್ಯೆ: 489/2009 ರಲ್ಲಿ ವೈವಾಹಿಕ ಮೊಕದ್ದಮೆಯನ್ನು ಹೂಡಿದ್ದನು.ದಿನಾಂಕ: 08.06.2003 ರಂದು ಪಕ್ಷಕಾರರ ನಡುವೆ ನೆರವೇರಿದ ವಿವಾಹವನ್ನು ರದ್ದುಪಡಿಸಿ,ದಿನಾಂಕ: 03.01.2013 ರಂದು ಪ್ರಸ್ತುತ ಪ್ರಶ್ನಿತ ತೀರ್ಪಿನೊಂದಿಗೆ ಸಾಮಾನ್ಯ ತೀರ್ಪಿನ ಅಡಿಯಲ್ಲಿ ಅದೇ ಕೌಟುಂಬಿಕ ನ್ಯಾಯಾಲಯವು ವಿವಾಹ ವಿಚ್ಛೇದನದ ಸದರಿ ಅರ್ಜಿಯನ್ನು ಪುರಸ್ಕರಿಸಿತು.ಆದುದರಿಂದ, ಒಪ್ಪಿಕೊಂಡಿರುವಂತೆ, ಪ್ರಸ್ತುತ ಅರ್ಜಿದಾರನು, ಒಬ್ಬ ಪತಿಯಾಗಿ, ಯಾವುದೇ ಸಮಯದಲ್ಲೂ ಕೌಟುಂಬಿಕ ನ್ಯಾಯಾಲಯದಲ್ಲಿ, ಸಂಕೀಣ ಕ್ರಿಮಿನಲ್ ಅರ್ಜಿಸಂಖ್ಯೆ: 489/2009 ರಲ್ಲಾಗಲಿ ಅಥವಾ ಕ್ರಿಮಿನಲ್ ಸಂಕೀರ್ಣ ಅರ್ಜಿಸಂಖ್ಯೆ: 296/2008 ರಲ್ಲಾಗಲಿ, ಎಲ್ಲಿಯೂ, ಪ್ರತ್ಯರ್ಜಿದಾರಳೊಂದಿಗಿನ ವಿವಾಹವು, ಆಕೆಯು ಕೆಲವೊಂದು ವೈದ್ಯಕೀಯ ಕಾಯಿಲೆಗಳಿಂದ ಬಳಲುತ್ತಿದ್ದುದ್ದರಿಂದ, ಅನೂರ್ಜಿತ ಮತ್ತು ಅಸಿಂಧುವಾಗಿತ್ತೆಂಬ ನಿಲುವನ್ನು ಹೊಂದಿರಲಿಲ್ಲ.

ಇನ್ನೊಂದೆಡೆ,ದಿನಾಂಕ: 08.06.2003 ರಂದು ನೆರವೇರಿದ್ದ ಪ್ರತ್ಯರ್ಜಿದಾರಳೊಂದಿಗಿನ ತನ್ನ ವಿವಾಹವನ್ನು ಒಪ್ಪಿಕೊಂಡ ನಂತರ ಮಾತ್ರವೇ, ವಿವಾಹ ವಿಚ್ಛೇದನ ಪರಿಹಾರ ಕೋರಿ ಸಂಕೀರ್ಣ ಕ್ರಿಮಿನಲ್ ಅರ್ಜಿಸಂಖ್ಯೆ: 489/2009 ರಲ್ಲಿ ವೈವಾಹಿಕ ಮೊಕದ್ದಮೆಯನ್ನು ಹೂಡಿದ್ದಾನೆ.ಕಾನೂನಿನ ದೃಷ್ಟಿಯಲ್ಲಿ, ಈ ವಿವಾಹವು ಪ್ರಾರಂಭದಿಂದಲೇ ಅಸಿಂಧುವಾಗಿತ್ತೆಂಬುದು ಅರ್ಜಿದಾರನ ವಾದವಾಗಿದ್ದಿದ್ದರೆ, ಆಗ, ಕಾನೂನಿನ ದೃಷ್ಟಿಯಲ್ಲಿ ಅವರ ವಿವಾಹವು ಅನೂರ್ಜಿತ ಮತ್ತು ಅಸಿಂಧುವೆಂದು ಘೋಷಿಸಲು ಘೋಷಣೆಯ ಪರಿಹಾರವನ್ನು ಕೋರಿ ಆತನು ಖಂಡಿತವಾಗಿಯೂ ಅರ್ಜಿಯನ್ನು ಸಲ್ಲಿಸಬಹುದಾಗಿತ್ತು.ಇನ್ನೊಂದೆಡೆ, ಈಗಾಗಲೇ ಅಭಿಪ್ರಾಯಪಟ್ಟಿರುವಂತೆ, ಪ್ರಸ್ತುತ ಪ್ರತ್ಯರ್ಜಿದಾರಳೊಂದಿಗೆ ತನ್ನ ವಿವಾಹವನ್ನು ಒಪ್ಪಿಕೊಂಡ ನಂತರ ಮಾತ್ರವೇ, ಆತನು ಹಿಂದು ವಿವಾಹ ಅಧಿನಿಯಮದ 13 ( 1) (i-ಎ) ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು

ಸಲ್ಲಿಸಿದ್ದಾನೆ.ಆದುದರಿಂದ ಪ್ರತ್ಯರ್ಜಿದಾರಳೊಂದಿಗೆ ಸಿಂಧುವಾದ ರೀತಿಯಲ್ಲಿ ವಿವಾಹವಾಗಿ, ವಿವಾಹವನ್ನೇ ಅರ್ಜಿದಾರನು ವಿವಾದಗೊಳಿಸಿರುವುದರಿಂದ, ಪ್ರತ್ಯರ್ಜಿದಾರಳಿಗೆ ಯಾವುದೇ ಜೀವನಾಂಶ ನೀಡಲು ತಾನು ಹೊಣೆಗಾರನಲ್ಲ ಎಂಬ ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳು ವಾದಿಸಿದ ಮೊದಲ ಅಂಶವನ್ನು ಒಪ್ಪಲಾಗುವುದಿಲ್ಲ.

14. ಪ್ರತ್ಯುರ್ಜಿದಾರಳು (ಪತ್ನಿಯು) ಗರ್ಭ ಧರಿಸಲು ಅಥವಾ ಸಂತೋಷದಾಯಕ ವೈವಾಹಿಕ ಜೀವನ ನಡೆಸಲು ಆಕೆಗಿದ್ದ ವೈದ್ಯಕೀಯ ಅಸಾಮರ್ಥ್ಯವನ್ನು ಅಡಗಿಸಿಡುವ ಮೂಲಕ ಅರ್ಜಿದಾರನ ಜೀವನವನ್ನು ಹಾಳು ಮಾಡಿದ್ದಾಳೆ, ಹಾಗಾಗಿ, ಆತನು ಯಾವುದೇ ಜೀವನಾಂಶವನ್ನು ನೀಡಲು ಹೊಣೆಗಾರನಲ್ಲ ಎಂಬುದು ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳ ವಾದದ ಎರಡನೇ ಅಂಶವಾಗಿದೆ.ಪತಿಯು ಅದೇ ಧೋರಣೆಯನ್ನು ಇಟ್ಟುಕೊಂಡು ಬಂದಿದ್ದರೆ, ಅಂಥ ಧೋರಣೆಯು, ಯಾವುದೇ ಸಿಂಧುವಾದ ಕಾರಣವಿಲ್ಲದೆ ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯ ವಿರುದ್ಧ ದ್ವೇಷ ಸಾಧನೆ ಮಾಡುವುದಲ್ಲದೆ ಮತ್ತೇನು ಅಲ್ಲವಾಗಿರುವುದರಿಂದ, ಮಾನ್ಯ ನ್ಯಾಯವಾದಿಗಳ ಸದರಿ ವಾದವನ್ನು ಪ್ರಾರಂಭದಲ್ಲೇ ತಳ್ಳಿಹಾಕಲು ಅರ್ಹವಾಗಿದೆ.ಅಂಥ ದ್ವೇಷಪೂರ್ಣ ಪ್ರವೃತ್ತಿಗೆ ಕಾನೂನಿನಲ್ಲಿ ಯಾವುದೇ ಅವಕಾಶವಿಲ್ಲ, ಬದಲಾಗಿ, ಇದು ಅಂಥ ದ್ವೇಷಪೂರ್ಣ ಪ್ರವೃತ್ತಿಯ ಮನೋಭಾವವನ್ನು ಪ್ರದರ್ಶಿಸುವ ಅರ್ಜಿದಾರನ ಸ್ವಭಾವ ಅಥವಾ ನಡತೆಯನ್ನು ಕುಗ್ಗಿಸುತ್ತದೆ.

ಇದಲ್ಲದೆ, ಆಕೆಯು ತನ್ನ ಪತಿಗೆ ಹಾನಿಯುಂಟು ಮಾಡಲು ಅಥವಾ ಆತನ ಜೀವನವನ್ನು ಹಾಳು ಮಾಡಲು ಮಾತ್ರವೇ ಆತನಿಂದ ಯಾವುದೇ ಅತ್ಯಾವಶ್ಯಕ ಸಂಗತಿಯನ್ನು ಉದ್ದೇಶಪೂರ್ವಕವಾಗಿ ಮುಚ್ಚಿಟ್ಟಿದ್ದಳು ಎಂಬುದನ್ನು ತೋರಿಸಲು ದಾಖಲೆಗಳಲ್ಲಿ ಏನೂ ಇರುವುದಿಲ್ಲ.ಅಂತಹ ಸನ್ನಿವೇಶದಲ್ಲಿ, ತನ್ನ ಜೀವನ ಹಾಳಾಯಿತು ಎಂದು ಪತಿ ಯೋಚಿಸುತ್ತಾನೆಂಬ ಕಾರಣ ಮಾತ್ರಕ್ಕೆ ಸ್ವತಃ ತನ್ನ ಜೀವನೋಪಾಯ ನೋಡಿಕೊಳ್ಳಲು ಅಸಮರ್ಥಳಾಗಿರುವುದಾಗಿ ಕ್ಲೇಮು ಮಾಡಿರುವ ಪತ್ನಿಯನ್ನು ವಂಚಿಸುವುದಕ್ಕಾಗಿ ಇದು ಕಾರಣವಾಗುವುದಿಲ್ಲ.ಹಾಗಾಗಿ, ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳ ವಾದದ ಸದರಿ ಅಂಶವನ್ನು ಸಹ ಒಪ್ಪಿಕೊಳ್ಳಲಾಗಿಲ್ಲ.

15. ಮೂರನೆಯದಾಗಿ, ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳು, ಅರ್ಜಿದಾರ-ಪತಿಯು, ತನ್ನ ವಯೋವೃದ್ಧ ತಾಯಿಯನ್ನು ಈಗಾಗಲೇ ನೋಡಿಕೊಳ್ಳುತ್ತಿರುವುದರಿಂದ, ಅದಕ್ಕಾಗಿ ಆತನ ಗಳಿಕೆಯು ಸಂಪೂರ್ಣವಾಗಿ ವಿನಿಯೋಗವಾಗುತ್ತದೆಯಾದ್ದರಿಂದ, ತನ್ನ ಪತ್ನಿಯ ಜೀವನಾಂಶ ನೀಡುವಷ್ಟು ಆರ್ಥಿಕವಾಗಿ ಸುಭದ್ರನಾಗಿಲ್ಲವೆಂಬ ವಿಷಯವನ್ನು ಸಹ ಪ್ರಸ್ತಾಪಿಸಿದ್ದಾರೆ.

ಆದರೆ, ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳ ಸದರಿ ವಾದವನ್ನು, ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯಾಲಯ ಸಲಹೆಗಾರರು (ಅಮಿಕಸ್ ಕ್ಯೂರಿ) ಪ್ರಬಲವಾಗಿ ವಿರೋಧಿಸಿ, ಪ್ರಾಸಾ -1 ರ ಸಾಕ್ಷ್ಯದ ಕೆಲವು ಭಾಗಗಳ ಕಡೆಗೆ ನ್ಯಾಯಾಲಯದ ಗಮನವನ್ನು ಸೆಳೆಯುವಾಗ, ಒಪ್ಪಿಕೊಂಡಿರುವಂತೆ, ಪ್ರಸ್ತುತ ಅರ್ಜಿದಾರ-ಪತಿಯು ಬೆಂಗಳೂರಿನ ಕೆ.ಆರ್. ಪುರಂನಲ್ಲಿ ಎರಡು ಟೈಲರಿಂಗ್ ಅಂಗಡಿಗಳನ್ನು ನಡೆಸುತ್ತಿದ್ದು, ಪ್ರತಿ ದಿನ 3,000/- ರೂ.ಗಳಿಂದ 5,000/ ರೂ.ಗಳಷ್ಟು ಹಣವನ್ನು ಗಳಿಸುತ್ತಿರುವುದಾಗಿ, ಇದಲ್ಲದೆ, ತನ್ನ ಕೈಕೆಳಗೆ ಕೆಲಸ ಮಾಡಲು ಐವರು ಕೆಲಸಗಾರರನ್ನು ಸಹ ನಿಯೋಜಿಸಿಕೊಂಡಿರುವುದಾಗಿ ಅವರು ನಿವೇದಿಸಿಕೊಂಡಿದ್ದಾರೆ.ಇದಲ್ಲದೆ, ಅರ್ಜಿದಾರನು ನಿವೇಶನಗಳ ರೂಪದಲ್ಲಿ ಸ್ಥಿರಾಸ್ತಿಯನ್ನು ಸಹ

ಹೊಂದಿರುವನೆಂದು ಮತ್ತು ಆತನ ಅವಲಂಬಿತರು ಇಲ್ಲವೆಂದು ಸಹ ಪ್ರಾಸಾ -1 ಹೇಳಿದ್ದಾರೆ.ಮುಂದುವರಿದು, ಆಕೆಯ ಪತಿಯ ಸಹೋದರರನು ಸಹ ಕೆಲಸ ಮಾಡುತ್ತಿದ್ದು, ಅವರ ತಾಯಿಯು, ಅವರ ಪತಿಯು ಸರ್ಕಾರಿ ನೌಕರನಾಗಿದ್ದರಿಂದ ಪಿಂಚಣಿಯನ್ನು ಸಹ ಪಡೆಯುತ್ತಿದ್ದಾರೆಂದು ಪ್ರಾಸಾ -1 ಹೇಳಿಕೆ ನೀಡಿದ್ದಾರೆ.

ಪ್ರಸ್ತುತ ಅರ್ಜಿದಾರನು (ಪತಿಯು), ಟೈಲರ್ ಆಗಿ ತನ್ನ ಕಸುಬನ್ನು ಅವಲಂಬಿಸಿರುವನೆಂಬುದನ್ನು ಮತ್ತು ಎರಡು ಟೈಲರಿಂಗ್ ಅಂಗಡಿಗಳನ್ನು ಹೊಂದಿದ್ದು, ಅವುಗಳಲ್ಲಿ ತನ್ನ ಕೈಕೆಳಗೆ ಕೆಲಸ ಮಾಡಲು ಕೆಲವು ಕೆಲಸಗಾರರನ್ನು ತೊಡಗಿಸಿಕೊಂಡಿರುವುದನ್ನು ಅಲ್ಲಗಳೆದಿಲ್ಲ.ತಾನು ಗಳಿಸುತ್ತಿರುವ ಸಹೋದರನನ್ನು ಹೊಂದಿರುವುದನ್ನು ಮತ್ತು ಅವರ ತಾಯಿಯು ನಿವೃತ್ತ ನೌಕರನ ಪತ್ನಿ ಎಂಬುದನ್ನು, ಹಾಗಾಗಿ, ಆಕೆಯು ಕುಟುಂಬ ನಿವೃತ್ತಿ ವೇತನ ಪಡೆಯುತ್ತಿರುವುದನ್ನು ಸಹ ಆತನು ಅಲ್ಲಗಳೆದಿಲ್ಲ.ಇದರ ಹೊರತಾಗಿ, ಪ್ರಸ್ತುತ ಅರ್ಜಿದಾರನು, ಇದುವರಿಗೆ ಕ್ರಿಮಿನಲ್ ಸಂಕೀರ್ಣ ಅರ್ಜಿಸಂಖ್ಯೆ: 296/2008 ನ್ನು ದಾಖಲಿಸಿದ ದಿನಾಂಕದಂದು ಇದ್ದಂತೆ, ಪ್ರಸ್ತುತ ಪ್ರತ್ಯರ್ಜಿದಾರಳೊಂದಿಗಿನ ತನ್ನ ವೈವಾಹಿಕ ಸಂಬಂಧವನ್ನು ಒಂದು ಸಲ ಒಪ್ಪಿಕೊಂಡಿದ್ದಾನೆ ಮತ್ತು ಆಕೆಯು ತನ್ನ ಪತ್ನಿ ಎಂಬುದನ್ನು ಒಪ್ಪಿಕೊಂಡಿದ್ದಾನೆ, ಹಾಗಿದ್ದರೆ, ಪತ್ನಿಯು ಸ್ವತಃ ಜೀವನೋಪಾಯ ನೋಡಿಕೊಳ್ಳಲು

ತಾನು ಅಸಮರ್ಥಳೆಂಬುದನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟರೆ ಮಾತ್ರ, ಆಕೆಯ ಜೀವನೋಪಾಯ ನೋಡಿಕೊಳ್ಳುವುದು ಆತನ ಕರ್ತವ್ಯವಾಗುತ್ತದೆ.ಆದುದರಿಂದ, ಅರ್ಜಿದಾರನು ಸ್ವತಃ ಹಣಕಾಸು ಅನನುಕೂಲತೆ ಅಥವಾ ತೊಂದರೆಯಲ್ಲಿದ್ದು, ಅದರಿಂದಾಗಿ, ಆತನು ತನ್ನ ಪತ್ನಿಯ ಜೀವನೋಪಾಯ ನೋಡಿಕೊಳ್ಳಲಾಗುವುದಿಲ್ಲ ಎಂಬುದನ್ನು ಒಪ್ಪಲಾಗುವುದಿಲ್ಲ.

16. ನಾಲ್ಕನೆಯದಾಗಿ, ಅರ್ಜಿದಾರನ ಈಗಿನ ವಯಸ್ಸು ಸುಮಾರು 52 ವರ್ಷಗಳಾಗಿದ್ದು, ಅದರಿಂದಾಗಿ, ವೈವಾಹಿಕ ಜೀವನ ಕುರಿತ ಆತನು ಭವಿಷ್ಯದ ನಿರೀಕ್ಷೆಗಳು ಸಹ ನಿರಾಶಾದಾಯಕವಾಗಿದ್ದು, ಇದೂ ಸಹ ತನ್ನ ಪತ್ನಿಗೆ ಯಾವುದೇ ಜೀವನಾಂಶ ನೀಡುವುದರಿಂದ ಆತನನ್ನು ತಡೆಯುತ್ತವೆ ಎಂಬುದು ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳ ವಾದವಾಗಿದೆ.

ಪ್ರತ್ಯರ್ಜಿದಾರಳ ಪರ ಮಾನ್ಯ ನ್ಯಾಯಾಲಯ ಸಲಹೆಗಾರರು (ಅಮಿಕಸ್ ಕ್ಯೂರಿ) ಸದರಿ ವಾದವನ್ನು ಖಂಡಿಸುತ್ತಾ, ಜೀವನಾಂಶಕ್ಕಾಗಿ ಸಲ್ಲಿಸಿದ ಅರ್ಜಿಯ ಸಂಬಂಧದಲ್ಲಿ ಪ್ರತ್ಯರ್ಜಿದಾರಳ ಪತಿಯ ಇಷ್ಟವು ಮುಖ್ಯವಾಗದೆ, ಆತನ ಕಾನೂನಿನ ಬಾಧ್ಯತೆಯು ಮುಖ್ಯವಾಗಿದ್ದು, ಜೀವನಾಂಶಕ್ಕೆ ಆದೇಶಿಸುವಾಗ ಅದನ್ನೇ ಪರಿಗಣಿಸಬೇಕಾಗುತ್ತದೆ ಎಂದು ನಿವೇದಿಸಿಕೊಂಡಿದ್ದಾರೆ.

ಮಾನ್ಯ ನ್ಯಾಯಾಲಯ ಸಲಹೆಗಾರರ (ಅಮಿಕಸ್ ಕ್ಯೂರಿ) ಸದರಿ ವಾದದಲ್ಲಿ ಹೆಚ್ಚು ಹುರುಳಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.ಚ

ಪತ್ನಿಗೆ ಜೀವನಾಂಶ ನೀಡುವುದು ಪತಿಯ ಇಚ್ಛೆ ಮಾತ್ರವಾಗಿರದೆ, ಸ್ವತಃ ತನ್ನ ಜೀವನೋಪಾಯ ನೋಡಿಕೊಳ್ಳಲು ಅಸಮರ್ಥಳಾಗಿರುವ ತನ್ನ ಪತ್ನಿಯ ಜೀವನೋಪಾಯ ನೋಡಿಕೊಳ್ಳುವುದು ಪತಿಯ ಕರ್ತವ್ಯವಾಗಿದೆ.ಇಂಥ ಸಂದರ್ಭದಲ್ಲಿ, ತನ್ನ ಪತಿಯಿಂದ ಪ್ರತ್ಯೇಕವಾಗಿ ವಾಸಿಸಲು ಅಥವಾ ದೂರವಿದ್ದು ಬದುಕಲು ಸಿಂಧುವಾದ ಕಾರಣವಿದೆಯೆಂದು ಆಕೆಗೆ ಮನವರಿಕೆಯಾದರೆ ಮತ್ತು ಸ್ವತಃ ತನ್ನ ಜೀವನೋಪಾಯ

ನೋಡಿಕೊಳ್ಳಲು ಆಕೆಯು ಅಸಮರ್ಥಳಾಗಿದ್ದರೆ, ಆಗ ಆಕೆಯ ಜೀವನೋಪಾಯ ನೋಡಿಕೊಳ್ಳುವುದು ಪತಿಯ ಕರ್ತವ್ಯವಾಗುತ್ತದೆ.

17. ಪ್ರಸ್ತುತ ಮೊಕದ್ದಮೆಯಲ್ಲಿ, ಕೌಟುಂಬಿಕ ನ್ಯಾಯಾಲಯವು ವಿವರವಾಗಿ ಕಾರಣಗಳನ್ನು ನೀಡಿದ ನಂತರ, ಪತ್ನಿಯು ಎದುರಿಸುತ್ತಿರುವ ಆರೋಪಿತ ವೈದ್ಯಕೀಯ ಅಸೌಖ್ಯ ಮತ್ತು ವಿವಾಹವಾಗಿ ಹೋದ ಮನೆಯಲ್ಲಿ ಆಕೆಯು ಅನುಭವಿಸಿದ ಕಷ್ಟಕೋಟಲೆಗಳು, ಆಕೆಯನ್ನು ತನ್ನ ಪತಿಯಿಂದ ದೂರವಿರುವಂತೆ ಮಾಡಿದ್ದು, ಅದನ್ನು ಆಕೆಯ ಪತಿಯು ಆಕ್ಷೇಪಿಸಿರಲಿಲ್ಲ.ಇನ್ನೊಂದೆಡೆ, ಪತಿಯು ಸ್ವತಃ ತಾನೇ ಮುಂದಾಗಿ ವಿವಾಹ ವಿಚ್ಛೇದನಕ್ಕೆ ಅರ್ಜಿಯನ್ನು ಸಲ್ಲಿಸಿದ್ದು, ಮೇಲೆ ಅಭಿಪ್ರಾಯಪಟ್ಟಿರುವಂತೆ ಅದು,ದಿನಾಂಕ: 08.06.2003 ರಂದು ಶಾಸ್ತ್ರೋಕ್ತವಾಗಿ ನಡೆದ ವಿವಾಹವನ್ನು ಕೊನೆಗಾಣಿಸಿ, ಆತನ ಪರವಾಗಿಯೇ ನಿರ್ಧಾರವಾಗಿರುತ್ತದೆ.ಆದುದರಿಂದ, ಪ್ರತ್ಯರ್ಜಿದಾರಳ-ಪತ್ನಿಯ ಪತಿಯಾಗಿ ಪ್ರಸ್ತುತ ಅರ್ಜಿದಾರನು ಆಕೆಯ ಜೀವನೋಪಾಯ ನೋಡಿಕೊಳ್ಳುವಲ್ಲಿ ನಿರ್ಲಕ್ಷ್ಯ ಲ್ಯು ತೋರಿದ್ದಾನೆ ಎಂಬುದು ಸ್ಪಷ್ಟವಾಗುತ್ತದೆ.

18. ಕೊನೆಯದಾಗಿ, ಒಪ್ಪಿಕೊಂಡಿರುವಂತೆ, ಪ್ರತ್ಯರ್ಜಿದಾರ-ಪತ್ನಿಯು ವಿದ್ಯಾರ್ಹತೆಯಲ್ಲಿ ಸ್ನಾತಕೋತ್ತರ ಪದವೀಧರಳಾಗಿದ್ದು, ಹಾಗಾಗಿ ಆಕೆಯು, ಜೀವನಾಂಶಕ್ಕಾಗಿ ಅರ್ಜಿದಾರ ಪತಿಗೆ ತೊಂದರೆ ಕೊಡದೆ, ಸ್ವತಃ ತನ್ನ ಜೀವನೋಪಾಯವನ್ನು ಕಂಡುಕೊಳ್ಳಬಹುದೆಂದು ಹೇಳಿ ಸಮರ್ಥಿಸಿಕೊಳ್ಳುವ ಪ್ರಯತ್ನವನ್ನು ಸಹ ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳು ಮಾಡಿದ್ದಾರೆ.

ಪ್ರತ್ಯರ್ಜಿದಾರಳ-ಪತ್ನಿಯ ಪರ ಮಾನ್ಯ ನ್ಯಾಯಾಲಯ ಸಲಹೆಗಾರರು (ಅಮಿಕಸ್ ಕ್ಯೂರಿ), ಒಬ್ಬ ವ್ಯಕ್ತಿಯು ಕೆಲವು ಶೈಕ್ಷಣಿಕ ಅರ್ಹತೆ ಅಥವಾ ಉನ್ನತ ಶೈಕ್ಷಣಿಕ ಅರ್ಹತೆಯನ್ನು ಹೊಂದಿದ ಮಾತ್ರಕ್ಕೆ, ಸ್ವಾವಲಂಬಿಯಾಗಿಸಲು ಸಾಧ್ಯವಿಲ್ಲ, ಆಕೆಯನ್ನು ಜೀವನೋಪಾಯ ಗಳಿಸಲು ಶಕ್ತವನ್ನಾಗಿಸುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.ಇದಲ್ಲದೆ ಅವರು, ಪತ್ನಿಯಾಗಿ ಪ್ರಸ್ತುತ ಪ್ರತ್ಯರ್ಜಿದಾರಳು ಹಣ ಗಳಿಸುವ ಸಾಮರ್ಥ್ಯ ಹೊಂದಿರಬಹುದಾದರೂ, ಒಪ್ಪಿಕೊಂಡಿರುವಂತೆ, ವೈದ್ಯಕೀಯ ಕಾರಣಗಳೂ ಒಳಗೊಂಡಂತೆ ವಿವಿಧ ಕಾರಣಗಳಿಗಾಗಿ ತನ್ನ ಜೀವನೋಪಾಯಕ್ಕೆ ಹಣ ಗಳಿಸಲು ಅಸಮರ್ಥಳಾಗಿದ್ದಾಳೆ.ಹಾಗಾಗಿ, ಆಕೆಗೆ ಜೀವನಾಂಶ ನೀಡುವುದು ಪ್ರಸ್ತುತ ಅರ್ಜಿದಾರ ಪತಿಯ ಕರ್ತವ್ಯವಾಗಿದೆ.

19. ದಂಡ ಪ್ರಕ್ರಿಯಾ ಸಂಹಿತೆಯ, 1973 ರ 125 ( 1) ನೇ ಪ್ರಕರಣವನ್ನು ಈ ಕೆಳಗಿನಂತೆ ಓದಲಾಗಿದೆ:

125. ಹೆಂಡತಿ, ಮಕ್ಕಳು ಮತ್ತು ತಂದೆ-ತಾಯಿಗಳ ಜೀವನಾಂಶಕ್ಕಾಗಿ ಆದೇಶ,

( 1) ಸಾಕಷ್ಟು ಸಂಪಾದನೆಯಿರುವ ಯಾರೇ ವ್ಯಕ್ತಿಯು,

( ಎ) ಸ್ವತಃ ತನ್ನ ಜೀವನ ನಿರ್ವಹಣೆಯನ್ನು ನೋಡಿಕೊಳ್ಳಲು ಅಸಮರ್ಥಳಾದ ತನ್ನ ಹೆಂಡತಿಯನ್ನು; ಅಥವಾ

(ಬಿ) ಸ್ವತಃ ತನ್ನ ಜೀವನ ನಿರ್ವಹಣೆ ನೋಡಿಕೊಳ್ಳಲು ಅಸಮರ್ಥವಾದ ತನ್ನ ವಿಧಿಸಮ್ಮತ ಅಥವಾ ವಿಧಿಸಮ್ಮತವಲ್ಲದ ವಿವಾಹಿತ ಅಥವಾ ಅವಿವಾಹಿತ, ಅಪ್ರಾಪ್ತ ವಯಸ್ಕ ಮಗುವನ್ನು ಅಥವಾ

(ಸಿ) ತನ್ನ ವಿಧಿಸಮ್ಮತ ಅಥವಾ ವಿಧಿಸಮ್ಮತವಲ್ಲದ (ವಿವಾಹಿತ ಪುತ್ರಿಯಲ್ಲದ) ಪ್ರಾಪ್ತ ವಯಸ್ಕ ಮಗುವು ಯಾವುದೇ ದೈಹಿಕ ಅಥವಾ ಮಾನಸಿಕ ವಿಕಲತೆ ಅಥವಾ ಕೃತಿಯ ಕಾರಣದಿಂದಾಗಿ ಸ್ವತಃ ತನ್ನ ಜೀವನ ನಿರ್ವಹಣೆ ನೋಡಿಕೊಳ್ಳಲು ಅಸಮರ್ಥ ವಾಗಿರುವಲ್ಲಿ, ಅಂತಹ ಮಗುವನ್ನು; ಅಥವಾ

(ಡಿ) ಸ್ವತಃ ತನ್ನ ಜೀವನ ನಿರ್ವಹಣೆ ನೋಡಿಕೊಳ್ಳಲು ಅಸಮರ್ಥನಾದ ಅಥವಾ ಅಸಮರ್ಥಳಾದ ತನ್ನ ತಂದೆ ಅಥವಾ ತಾಯಿಯನ್ನು, ಅಂತಹ ನಿರ್ಲಕ್ಷ್ಯ ಅಥವಾ ತಿರಸ್ಕಾರವು ರುಜುವಾತಾದ ಮೇಲೆ, ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರು, ಅಂತಹ ವ್ಯಕ್ತಿಗೆ ತನ್ನ ಹೆ ಂ ಡತಿ ಅಥವಾ ಅಂತಹ ಮಗು, ತಂದೆ ಅಥವಾ ತಾಯಿಯ ಜೀವನ ನಿರ್ವಹಣೆಗಾಗಿ, ಅಂತಹ ಮ್ಯಾಜಿಸ್ಟ್ರೇಟನು ಸೂಕ್ತವೆಂದು ಆಲೋಚಿಸುವಂತಹ ಮಾಸಿಕ ಭತ್ಯೆಯನ್ನು ಸಂದಾಯ ಮಾಡಲು ಆದೇಶಿಸಬಹುದು, ಮತ್ತು ಮ್ಯಾಜಿಸ್ಟ್ರೇಟನು ಕಾಲ ಕಾಲಕ್ಕೆ ನಿರ್ದೇಶಿಸಬಹುದಂತೆ, ಅಂಥ ವ್ಯಕ್ತಿಗೆ ಅದನ್ನು ಸಂದಾಯ ಮಾಡಬೇಕೆಂದು ಆದೇಶಿಸಬಹುದು.

ಪರಂತು, ಮ್ಯಾಜಿಸ್ಟ್ರೇಟನು (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಅಪ್ರಾಪ್ತ ವಯಸ್ಕ ಹೆಣ್ಣು ಮಗುವಿನ ತಂದೆಗೆ, ಅವಳಿಗೆ ಮದುವೆಯಾಗಿದ್ದು, ಅಂತಹ ಅಪ್ರಾಪ್ತ ವಯಸ್ಕ ಹೆಣ್ಣು ಮಗುವಿನ ಗಂಡನು ಸಾಕಷ್ಟು ಸಂಪಾದನೆಯನ್ನು ಹೊಂದಿಲ್ಲವೆಂದು ಅವನಿಗೆ ಮನದಟ್ಟಾದರೆ, ಅಂತಹ ಭತ್ಯವನ್ನು ಅವಳು ಪ್ರಾಪ್ತ ವಯಸ್ಕಳಾಗುವವರೆಗೆ ಕೊಡಲು ಆದೇಶಿಸಬಹುದು;

[ಮತ್ತೂ ಪರಂತು, ಈ ಉಪ-ಪ್ರಕರಣದ ಅಡಿಯಲ್ಲಿ ಜೀವನ ನಿರ್ವಹಣೆ ಸ ಂ ಬ ಂ ಧದಲ್ಲಿನ ಮಾಸಿಕ ಭತ್ಯೆಗೆ ಸಂಬಂಧಿಸಿದ ವ್ಯವಹರಣೆಯ ಇತ್ಯರ್ಥದ ಅವಧಿಯಲ್ಲಿ, ಆತನ ಪತ್ನಿಯ ಅಥವಾ ಅಂಥ ಮಗುವಿನ, ತಂದೆಯ ಅಥವಾ ತಾಯಿಯ ಜೀವನ ನಿರ್ವಹಣೆಗಾಗಿ ಮಧ್ಯಂತರ ಮಾಸಿಕ ಭತ್ಯೆಯನ್ನು ಮತ್ತು ಮ್ಯಾಜಿಸ್ಟ್ರೇಟ ಟನು ಸೂಕ್ತವೆಂದು ಪರಿಗಣಿಸಬಹುದಾಂಥ ವ್ಯವಹರಣೆಯ ವೆಚ್ಚಗಳನ್ನು ಅಂಥ ವ್ಯಕ್ತಿಗೆ ಸಂದಾಯ ಮಾಡಲು ಹಾಗೂ ಕಾಲ ಕಾಲಕ್ಕೆ ಮ್ಯಾಜಿಸ್ಟ್ರೇಟನು ನಿರ್ದೇಶಿಸಬಹುದಾದಂಥ ವ್ಯಕ್ತಿಗೆ ಅದನ್ನು ಸಂದಾಯ ಮಾಡಲು ಆದೇಶಿಸಬಹುದು;

ಅಲ್ಲದೆ ಪರಂತು, ಮಧ್ಯಂತರ ಜೀವನ ನಿರ್ವಹಣೆಗೆ ಮಾಸಿಕ ಭತ್ಯೆ ಮತ್ತು ಎರಡನೇ ಪರಂತುಕದ ಅಡಿಯಲ್ಲಿನ ವ್ಯವಹರಣೆಯ ವೆಚ್ಚಗಳ ಸಂಬಂಧದಲ್ಲಿನ ಅರ್ಜಿಯನ್ನು, ಸಾಧ್ಯವಿದ್ದಷ್ಟು ಬೇಗನೆ, ಅಂಥ ವ್ಯಕ್ತಿಗೆ ಅರ್ಜಿಯ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಅರವತ್ತು ದಿನಗಳ ಒಳಗೆ ವಿಲೆ ಮಾಡತಕ್ಕದ್ದು. ]

ವಿವರಣೆ.- ಈ ಅಧ್ಯಾಯದ ಉದ್ದೇಶಗಳಿಗಾಗಿ,

( ಎ) " ಅಪ್ರಾಪ್ತ ವಯಸ್ಕ " ಎಂದರೆ, ಭಾರತ ಪ್ರಾಪ್ತ ವಯಸ್ಕತಾ ಅಧಿನಿಯಮ, 1875 ರ (1875 ರ 9) ಉಪಬ ಂ ಧಗಳ ಮೇರೆಗೆ ಪ್ರಾಪ್ತ ವಯಸ್ಸನ್ನು ಪಡೆದಿಲ್ಲವೆಂದು ಭಾವಿಸಲಾಗಿರುವ ವ್ಯಕ್ತಿ;

(ಬಿ) " ಹೆಂಡತಿ " ಎಂಬ ಪದವು ಪತಿಯಿಂದ ವಿವಾಹ ವಿಚ್ಛೇದಿತಳಾಗಿರುವ ಅಥವಾ ವಿವಾಹ ವಿಚ್ಛೇದನ ಪಡೆದಿರುವ ಮತ್ತು ಪುನರ್ವಿವಾಹವಾಗದಿರುವ ಮಹಿಳೆಯನ್ನು ಒಳಗೊಳ್ಳುತ್ತದೆ.

ಜೀವನಾಂಶವನ್ನು ಕೇಮು ಮಾಡುವುದಕ್ಕಾಗಿ ಪತ್ನಿ ಅಥವಾ ಮಕ್ಕಳು ಎಂಬ ಅರ್ಹತೆಯು ಹಕ್ಕು ನೀಡದೆ, ತಮ್ಮನ್ನು ತಾವು ನೋಡಿಕೊಳ್ಳಲಾಗದಿರುವ ಅಸಮರ್ಥತೆಯು ಅವರಿಗೆ ಹಕ್ಕು ನೀಡುತ್ತದೆ ಎಂಬುದನ್ನು ದಂಡ ಪ್ರಕ್ರಿಯಾ ಸಂಹಿತೆಯ 125 ( 1) ( ಎ) ಮತ್ತು (ಬಿ) ಪ್ರಕರಣವು ಹೆಚ್ಚು ಸ್ಪಷ್ಟವಾಗಿ ಹೇಳುತ್ತದೆ.

ಮೇಲಿನ ಪ್ರಕರಣದ, ಅದರಲ್ಲೂ ನಿರ್ದಿಷ್ಟವಾಗಿ ಸದರಿ ಪ್ರಕರಣದ ( 1) (   ಎ) ಮತ್ತು 1 (ಬಿ) ಉಪ-ಪ್ರಕರಣದ ಓದುವಿಕೆಯು, ತಮ್ಮ ಜೀವನ ನಿರ್ವಹಣೆಯನ್ನು ನೋಡಿಕೊಳ್ಳಲು ಪತ್ನಿಯ ಅಥವಾ ಮಗಳ ಅಸಮರ್ಥತೆಯನ್ನು ಕಾನೂನು ಅಗತ್ಯಪಡಿಸುತ್ತದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ.ತನ್ನ ಜೀವನ ನಿರ್ವಹಣೆ ನೋಡಿಕೊಳ್ಳಲು ಅಸಮರ್ಥಳಾದ ವ್ಯಕ್ತಿಯನ್ನು, ಆಕೆಯ ಜೀವನೋಪಾಯಕ್ಕೆ ಗಳಿಸುವ ಆಕೆಯ ಸಾಮರ್ಥ್ಯಕ್ಕೆ ಸಮನಾಗಿಸಲಾಗುವುದಿಲ್ಲ.ಆ ವ್ಯಕ್ತಿಯು ಯಾವುದೇ ಕೆಲಸಕ್ಕೆ ಶೈಕ್ಷಣಿಕವಾಗಿ ಉತ್ತಮ ವಿದ್ಯಾರ್ಹತೆ ಹೊಂದಿದ್ದರೂ ಅಥವಾ ನಿರ್ದಿಷ್ಟ ಕೆಲಸವನ್ನು ಮಾಡಲು ಅರ್ಹರಾಗಿರಬಹುದಾದರೂ, ಅಥವಾ ಖಾಸಗಿ ಸಂಸ್ಥೆಗಳಲ್ಲಾಗಲಿ ಅಥವಾ ಯಾವುದೇ ಇತರ ಸ್ವರೂಪದ ಸಂಸ್ಥೆಗಳಲ್ಲಾಗಲಿ ಯಾವುದೇ ಹುದ್ದೆ ಅಥವಾ ಕೆಲಸಕ್ಕೆ ಅರ್ಜಿ ಸಲ್ಲಿಸಲು ಸಮರ್ಥಳಾಗಿರಬಹುದಾಗಿದ್ದರೂ, ಆಗಲೂ ಆಕೆಯು ತನ್ನ ಜೀವನ ನಿರ್ವಹಣೆ ನೋಡಿಕೊಳ್ಳಲು ಅಸಮರ್ಥಳಾಗಿರಬಹುದು.ಆ ಕಾರಣಕ್ಕಾಗಿಯೇ ಕೆಲವು ಶೈಕ್ಷಣಿಕ ಅರ್ಹತೆಗಳನ್ನು ಪಡೆದಿದ್ದ ಮಾತ್ರಕ್ಕೆ, ಮಹಿಳೆಯು ತನ್ನ ಜೀವನ ನಿರ್ವಹಣೆ ನೋಡಿಕೊಳ್ಳಲು ಸಮರ್ಥಳು ಎಂದು ಪರಿಗಣಿಸಲಾಗುವುದಿಲ್ಲ.ಮೊಕದ್ದಮೆಯ ಸಂದರ್ಭಗಳಲ್ಲಿ, ವ್ಯಕ್ತಿಯ ಶೈಕ್ಷಣಿಕ ಅರ್ಹತೆಯು ಆತನು ನೆರವಿಗೆ ಒದಗಬಹುದು ಅಥವಾ ಕೆಲಸಗಳಿಗೆ ಅರ್ಜಿ ಸಲ್ಲಿಸುವಲ್ಲಿ ಅಥವಾ ಕೆಲವು ಜೀವನೋಪಾಯಕ್ಕೆ ಪ್ರಯತ್ನಿಸುವಲ್ಲಿ ಅಥವಾ ಕೆಲವು ವೃತ್ತಿಗಳನ್ನು ಪಡೆಯುವಲ್ಲಿ ಕಾಪಾಡಬಹುದು.ಅಂಥ ಶೈಕ್ಷಣಿಕ ಅರ್ಹತೆಯನ್ನು ಪಡೆದ ಮಾತ್ರಕ್ಕೆ, ಅಂಥ ಅರ್ಹತೆ ಹೊಂದಿದ ವ್ಯಕ್ತಿಯು, ನಿರ್ದಿಷ್ಟವಾಗಿ ದಂಡ ಪ್ರಕ್ರಿಯಾ ಸಂಹಿತೆಯ 125 ನೇ ಪ್ರಕರಣದ ಅಡಿಯಲ್ಲಿ, ಪತ್ನಿಯು ತನ್ನ ಜೀವನ ನಿರ್ವಹಣೆ ನೋಡಿಕೊಳ್ಳಲು ಸಮರ್ಥಳು ಎಂಬ ನಿರ್ಣಯಕ್ಕೆ ಯಾರೂ ಬರಲಾಗುವುದಿಲ್ಲ.ಮಹಿಳೆಯು ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ತಾನು ಕಾರ್ಯನಿರ್ವಹಿಸುತ್ತಿರುವ ಕೆಲಸಕ್ಕೆ ರಾಜಿನಾಮೆ ಅ ಕೊಡುವುದರಿಂದ ಹಿಡಿದು ಹಲವಾರು ಕಾರಣಗಳಿರಬಹುದು ಮತ್ತು ಆಕೆಯ ಪತಿಯು ಆಕೆಯ ಜೀವನ ನಿರ್ವಹಣೆ ನೋಡಿಕೊಳ್ಳಬೇಕೆಂದು ನಿರೀಕ್ಷಿಸಬಹುದು.ತನ್ನ ಜೀವನ ನಿರ್ವಹಣೆಗೆ ತನ್ನ ಪತಿಯು ಹಣ ನೀಡುವಂತೆ ಮಾಡುವ ಉದ್ದೇಶದಿಂದಲೇ ಕೆಲಸಕ್ಕೆ ರಾಜಿನಾಮೆ ನೀಡುವ ಅಥವಾ ವೃತ್ತಿ ಬಿಡುವ ಅಂಥ ಕೃತ್ಯವನ್ನು ಮಾಡಿದ್ದಾಳೆ ಎಂಬ ತರ್ಕಬದ್ಧ ಸಾಕ್ಷ್ಯವನ್ನು ದಾಖಲೆಗೆ ತಂದ ಹೊರತು, ಅಂಥ ಸಂದರ್ಭಗಳು ಬಹುಶಃ ವಿಭಿನ್ನ ನಿರ್ಣಯವನ್ನು ಖಚಿತಪಡಿಸುತ್ತವೆ.ಇಲ್ಲದೆ ಹೋದರೆ, ಪತ್ನಿಯು ಕೆಲವು ಶೈಕ್ಷಣಿಕ ಅರ್ಹತೆಗಳನ್ನು ಪಡೆದಿರುವಳು, ಅದು ಅವಳಿಗೆ ಕೆಲವು ಉದ್ಯೋಗ ಅಥವಾ ನೌಕರಿಯನ್ನು ಒದಗಿಸಿಕೊಡಬಹುದು, ಆಕೆಯು ಜೀವನ ನಿರ್ವಹಣೆ ಭತ್ಯವನ್ನು ನಿರಾಕರಿಸಬಹುದು ಎಂದು ಹೇಳುವುದು, ಯಾವಾಗಲೂ ಅವಶ್ಯಕವೇನಲ್ಲ.

20. ಒಬ್ಬ ವ್ಯಕ್ತಿಯು ಸರ್ಕಾರಿ ಕಚೇರಿಯಲ್ಲಿನ ಹುದ್ದೆಯಲ್ಲಿ ನೇಮಕಗೊಳ್ಳುವ ಅರ್ಹತೆಯನ್ನು ಹೊಂದಿರಬಹುದಾದರೂ ಅಥವಾ ಉತ್ತಮ ಶೈಕ್ಷಣಿಕ ಅರ್ಹತೆಯನ್ನು ಪಡೆದಿರಬಹುದಾದರೂ, ಆತನು/ಆಕೆಯು, ಯಾವುದೇ ನೌಕರಿ ಲಭ್ಯವಿಲ್ಲದಿರುವ ಅಥವಾ ಗಳಿಸುವುದಕ್ಕೆ ಯಾವುದೇ ಅಸಮರ್ಥತೆಯನ್ನು ಹೊಂದಿರಬಹುದಾದ ಕಾರಣದಿಂದ ತನ್ನ ಜೀವನೋಪಾಯಕ್ಕೆ ಹಣ ಗಳಿಸಲು ಅಸಮರ್ಥರಾಗಿರಬಹುದು.ಈ ಸಂದರ್ಭದ ಹಿನ್ನೆಲೆಯಲ್ಲಿ, ಪ್ರತಿಯೊಂದು ಮೊಕದ್ದಮೆಯ ಸಂಗತಿಗಳನ್ನು ಮತ್ತು ಸಂದರ್ಭಗಳನ್ನು ವಿಶ್ಲೇಷಿಸಬೇಕಾಗುತ್ತದೆ.

21. ಪ್ರಸ್ತುತ ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳ ಹಿನ್ನೆಲೆಯಲ್ಲಿ, ಪ್ರಸ್ತುತ ಪ್ರತ್ಯರ್ಜಿದಾರಳು ಎಂ.ಎ., ಎಂ.ಎಡ್. ಪದವೀಧರಳೆಂದು ತೋರಿಸಿದಾಗ್ಯೂ, ಮೇಲೆ ಅಭಿಪ್ರಾಯಪಟ್ಟಂತೆ, ಮತ್ತು ಆಕೆಯ ಸಾಕ್ಷ್ಯದಲ್ಲಿ ಕಂಡುಬಂದಂತೆ, ಆಕೆಯು ಯಾವುದೇ ಕೆಲಸವನ್ನು ಪಡೆಯಲಾಗಿಲ್ಲ, ಇದನ್ನೂ ಸಹ ಅರ್ಜಿದಾರ-ಪತಿಯು ಗಂಭೀರವಾಗಿ ಪರಿಗಣಿಸಿರುವುದಿಲ್ಲ.ಹಾಗಾಗಿ, ಆಕೆಯು ತನ್ನ ಜೀವನ ನಿರ್ವಹಣೆ ನೋಡಿಕೊಳ್ಳಲು ಅಸಮರ್ಥಳಾಗಿರುವಳೆಂಬುದನ್ನು ಆಕೆಯು ತೋರಿಸಿಕೊಟ್ಟಿರುವಳು.

ಈ ಎಲ್ಲಾ ಸಂಗತಿಗಳನ್ನು ಪರಿಗಣಿಸಿದ ನಂತರ, ಮಾನ್ಯ ಕೌಟುಂಬಿಕ ನ್ಯಾಯಾಲಯವು, ತನ್ನ ಮುಂದೆ ಮಂಡಿಸಿದ ಸಾಕ್ಷ್ಯಗಳನ್ನು ವಿಶ್ಲೇಷಿಸಿದ ನಂತರ, ತನ್ನ ಮುಂದಿರುವ ಅರ್ಜಿದಾರಳು, ಎಂದರೆ ಪತ್ನಿಯು ಜೀವನಾಂಶಕ್ಕೆ ಅರ್ಹಳಿರುವಳೆಂಬ ನಿರ್ಣಯಕ್ಕೆ ಬಂದಿದೆ ಮತ್ತು ಅದರಲ್ಲಿನ ಪ್ರತ್ಯರ್ಜಿದಾರನು (ಇದರಲ್ಲಿನ ಅರ್ಜಿದಾರನು), ತನ್ನ ಪತ್ನಿಗೆ (ಇದರಲ್ಲಿನ ಪ್ರತ್ಯರ್ಜಿದಾರಳಿಗೆ) ಸದರಿ ಅರ್ಜಿಯನ್ನು ಸಲ್ಲಿಸಿದ ದಿನಾ ೦ ಕದಿ ೦ ದ ಮಾಸಿಕ 3,000/- ರೂ.ಗಳ ಜೀವನಾಂಶ ನೀಡಲು ಹೊಣೆಗಾರನಾಗುತ್ತಾನೆ.

22. ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳನ್ನು ಪರಿಗಣಿಸಿ, ಕೌಟುಂಬಿಕ ನ್ಯಾಯಾಲಯವು ಆದೇಶಿಸಿದ ಜೀವನಾಂಶದ ಪ್ರಮಾಣವು ಅತಿ ಹೆಚ್ಚು ಎಂದಾಗಲಿ ಅಥವಾ ದುಬಾರಿ ಎಂದಾಗಲಿ ಕಂಡುಬರುವುದಿಲ್ಲ.ಪಶ್ನಿತ ಆದೇಶದಲ್ಲಿ ಯಾವುದೇ ರೀತಿಯ ಹಸ್ತಕ್ಷೇಪವನ್ನು ಸಮರ್ಥಿಸುವ ಯಾವುದೇ ತರ್ಕವಿರುದ್ಧತೆ, ಕಾನೂನುಬಾಹಿರತೆ ಅಥವಾ ದೋಷವು ನನಗೆ ಕಂಡುಬಂದಿರುವುದಿಲ್ಲ.

ತದನುಸಾರವಾಗಿ, ನಾನು ಈ ಮುಂದಿನ ಆದೇಶವನ್ನು ಹೊರಡಿಸುತ್ತಿದ್ದೇನೆ:

## ಆದೇಶ

ಪುನರೀಕ್ಷಣಾ ಅರ್ಜಿಯನ್ನು ಗುಣಾರ್ಹತೆಗಳಲ್ಲವೆಂದು ವಜಾಗೊಳಿಸಲಾಗಿದೆ.

ನ್ಯಾಯಾಲಯವು, ಪ್ರತ್ಯರ್ಜಿದಾರಳ ಪರ ಮಾನ್ಯ ನ್ಯಾಯಾಲಯ ಸಲಹೆಗಾರರಾದ (ಅಮಿಕಸ್ ಕ್ಯೂರಿ) ಶ್ರೀಮತಿ ಅರ್ಚನಾ ಕೆ.ಎಂ. ಇವರು ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿ, ರಿಜಿಸ್ಟ್ರಿಯವರು ಸಂದಾಯ ಮಾಡಬೇಕಾದ 4,000/ ರೂ.ಗಳಿಗಿಂತ ಕಡಿಮೆ ಇರದ ಮೊತ್ತವನ್ನು ಗೌರವಧನವಾಗಿ ನೀಡಬೇಕೆಂದು ಶಿಫಾರಸು ಮಾಡುತ್ತದೆ.

ರಿಜಿಸ್ಟ್ರಿಯವರು ವಿಳಂಬವಿಲ್ಲದೆ ಸಂಬಂಧಪಟ್ಟ ನ್ಯಾಯಾಲಯಕ್ಕೆ ಕೌಟುಂಬಿಕ ನ್ಯಾಯಾಲಯದ ದಾಖಲೆಗಳನ್ನು ವರ್ಗಾಯಿಸುವುದು.